7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ (ಸ್ಕೇಲ್ಪ್ರಕಾರ) ಆಸಿಪತ್ರಿ ಆಹಾರ ಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಪ್ಯವಾಗತಕ್ಕ ಪದಾರ್ಥಗಳು, ದೀಪದ ಯಂಣೆ, ಕೆರೋಸಿರ್ಯೆ ಯಂಣೆ, ಲಾಂಪ್ರೆಗಳು, ಮತ್ತು ಅನುಗಳ ರಿಪೇರಿ ಮಾಡಿಸುವಣ, ಕೈದೀರು ಸ್ನಾನ ಮಾಡಲಿಕ್ಕೆ ೀಗೇಕಾಯಿ, ತಮೂಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಅಡಿಗೆಮಾಡುವದಕ್ಕೆ ತಾಂಬ್ರ ಮತ್ತು ಮಣ್ಣಿನ ಪಾತ್ರೆಗಳು, ಕೈದಿಗಳು ಊಟಮಾಡುವದಕ್ಕೆ ಮಂಣಿನ ಪರಿವಾಣಗಳು, ಪಾದುಬಾನೆ ಬುಟ್ಟಿಗಳು, ಬಣಗಿದ ಮಂಣು, ನೀರುಕುಡಿಯುವದಕ್ಕೆ ಮಂಣಿನ ಲೋಟುಗಳು, ಹೆಂಣು ಕೈದೀರಮಕ್ಕಳಿಗೆ ಕೇಕಾವ ಹಾಲು, ರೊಟ್ಟಿ ಸಕ್ಕರೆ ಮಗ್ಯೆರೇ ಪದಾರ್ಥಗಳು, ಹೊಗೆಹಾಕುವ ಬಗ್ಯೆ ಗಂಧಕ, ಚವಳು ಮತ್ತು ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟಿ ಬಿವಾಯಿ ಖೈದಿಗಳಿಗೆ ಬೇಕಾವ ದರೋಬಸ್ತು ಇತರ ಪದಾರ್ಥಗಳೂ ಅಡಗಿರತಕ್ಕವು.

8. ಸೂಪರ್ಟಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ: ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮಂಜೂರಾದ ದರಖಾಸ್ತುದಾರನ ಡಿಪಾಜಿಟ್ ವೊಬಲಗು ನಿಲ್ಲಿಸಿಕೊಳ್ಳಲ್ಪಟ್ಟ್ಯು, ಆತನು ಕಂಟ್ರಾಕ್ಟು ಮುಚ್ಚಲಿಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಮೆಂಟ್ ಪತ್ರಗಳ ಮೂಲಕವಾದರೂ 500 ರೂಪಾಯಿಗಳ ವೊಬಲಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ನಂಗತಿ ತನಿಗೆ ತಿಳಿಸಲ್ಪಟ್ಟ್ಯ ತಾರೀಖು ಮೊದಲು ಬಂದು ವಾರದ ವಳಗಾಗಿ ಕೊಡಲಿಕ್ಕಾಗಲಿ ತಪ್ಪಿದರೆ, ಅದು ಸರಕಾಕ್ಕೆ ದಂಡವಾಗಿ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರಗೆ ನಗದು ಆಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ್ಯ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಮೈಸೂರು ಜೈಲ್ ಸೂಪರಿಂಟೆಂಡೆಂಟರವರಿಂದ ವೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಸಾವಾನುಗಳ ಬಗ್ಯೆ ಬಂದು ಖೋಲಿಯು ಬಿಡಲ್ಪಡುವದು, ಅದರಲ್ಲಿ ಆತನು ನಪ್ಯವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಪ್ಯವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ $7\frac{1}{2}$ ಘಂಟೆಗೆ ಜೈಲ್ ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಕಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರವ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಮೈಸೂರು ಜೈಲ್ ಸೂಪರ್ಟಂಡೆಂಟರವರೆ ಯಕ್ಕ್ಯೂರೀಯಿಂದ 50 ರೂಪಾಯಿಗೆ ಮಿಂಚದ ಜುರ್ಮಾನೆಯು ಹಾಕಲ್ಪಡುವದು; ಖರ್ ಖಾಸ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟ್ಯು ಜಾಮೀನ್ ವೊಬಲಗು ಸರಕಾರಕ್ಕೆ ಸೇರಿಕೊಳ್ಳಲ್ಪಡುವದು.

14 ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಮೈಸೂರು ಜೈಲ್ ಸೂಪರ್ಟಂಡೆಂಟರವರ ನಿರ್ಣಯವೇ ಆಬ್ಜೆಕ್ಟಾಗಿರತಕ್ಕದ್ದು.

16. ಆಹಾರ ದರದ ಪಟ್ಟಿಯನ್ನು ಯಿನ್ನು ಅವಶ್ಯಕವಾದ ಹೆಚ್ಚಿಗೆ ತಪಸೀಲ್‌ಗಳನ್ನು ಸಹಾ ಮೈಸೂರು ಜೈಲ್ ಸೂಪರ್ಟಂಡೆಂಟರವರನ್ನ ಕೇಳಿ ತಿಳದುಕೊಳ್ಳಬಹುದು. ಹಾಲಿ ಜೈಲ್‌ನಲ್ಲಿ 209 ಮಂದಿ ಕೈದೀರು ಇದ್ದಾರೆ, ಈ ಸಾಲಿನಲ್ಲಿ 250ರ ವರಿಗೆ ಜಾಸ್ತೀ ಆಗಬಹುದಾಗಿ ಅಂದಾಜ್ ಇರುತ್ತೆ.

ಟಿ. ಜೆ. ಮೆಕಗ್ಗಾ,
ಸೂಪರ್ಟಂಡೆಂಟ್.

ಹಾಸನ ಸಬ್ ಡಿವೀಜ್ಯ.

ತಾರೀಖು 4ನೇ ಫಿಬ್ರವರಿ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ವಿರ್ವಾ ಸಾಹೇಬರವರ ಹುಕ್ಕುಂ ಬಮೋಜೀಬ್ ಹಾಸನ ಸಬ್ ಡಿವೀಜ್ಯ ಪೈಕಿ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮೂರನಹಳ್ಳಿ ಘಾಟಿಯಲ್ಲಿ ಟೋಲ್‌ಗೇಟ್ ಯಿಂಬ ಸುಂಕದ ಕಟ್ಟೆ ವಳಗೆ ಸ್ಯ 1885ನೇ ಏಪ್ರಲ್ ಮಾಹೆ 1ನೇ ಮಕ್ತುಂ ಲಾಗಾಯಿತು 1886ನೇ ಇಸವಿ ಮಾರ್ಚಿ 31ರ ವರಿಗೆ ಸುಂಕ ವಸೂಲ್ ಮಾಡುವ ಸ್ವಾತಂತ್ರ್ಯವು ಸ್ಯ 1885ನೇ ಇಸವಿ ಮಾರ್ಚಿ ತಾರೀಖು 18ರಲ್ಲು ಸಕ್ಲೇಸಪುರ ವೊಕ್ಕುಂ ತಾಲ್ಲೂಕು ಕಚೇರಿಯೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲೀ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗ್ಗತ್ತಾಗಿರುವ ಷೆಡ್ಯೂಲ್‌ನಲ್ಲಿ ನಮೂದಾಗಿ ಇರುವ ದರಗಳ ಮೇರಿಗೇನೆ ಟೋಲ್ ವಸೂಲ್ ಮಾಡಬೇಕು ಮತ್ತು ಸ್ರ್ 1876ನೇ ಇಸವಿ ನವಂಬರ್ 4ನೇ ಮಕ್ತುಂ 274ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷನರಿ ಸಾಹೇಬರವರ ನೋಟಿಫಿಕೇಷ್‌ನಲ್ಲಿ ಫಾಯಿಷ್ ಆಗಿ ಇರುವ ರೂಲ್ಸ್ ಪ್ರಕಾರ ನಡಕೊಳ್ಳಬೇಕು.

3. ಚಡದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಸಬ್ ಡಿವೀರ್ಜ್ ಆಫೀಸರವರು ಅಧಿಕಾರ ವುಳ್ಳವರಿಕೊಂಡಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ ನಾಲ್ಕರಲ್ಲಿ ವಂದಂಕ ಮೊಬಲಗನ್ನು ಅಡ್ವಾನ್ಸಾಗಿ ಶೇವಣಿ ಇಟ್ಟು ಬಾಕಿ ಮೊಬಲಗನ್ನು 1885ನೇ ಇಸವಿ ಏಪ್ರಿಲ್ 20ರ ಲಾಗಾಯಿತು ಸಮನಾದ ಆರು ಖಿಸ್ತುಗಳಾಗಿ ಪ್ರತಿ ತಿಂಗಳು 20ನೇ ತಾರೀಖಿಗೆ ಪಾವತೀ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೇವಾರೀ ಖಿಸ್ತು ಮೊಬಲಗನ್ನೂ ತಪ್ಪದೇ ಕೊಡುತ್ತಾ ಬರುವದಕ್ಕೆ ಲಾಯಖಾದ ವಬ್ಬನನ್ನು ಜಾಮೀರ್ದಾ ಕೊಡಬೇಕು.

5. ಶೇವಣಿ ಇಡದೇ ಇದ್ದರೆ ಅಥವಾ ಜಾಮೀರ್ದಾ ಕೊಡದೆ ಇದ್ದರೆ ದರಖಾಸ್ತುದಾರನಿಗೆ ಲುಕ್ಸಾನ್‌ಕರವಾಗಿ ಕಂಟ್ರಾಕ್ಟು ಎರಡನೇ ಹರಾಜು ಮಾಡಲ್ಪಡುವದು. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕೀಯಾದ ಮೊಬಲಗಿಗೆ ಪಾವತೀ ತಾರೀಖಿನ ವರಿಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ ವಂದು ಕಾಸಿನಂತೆ ಬಡ್ಡಿ ವಸೂಲ್ ಮಾಡಲ್ಪಡುವದು. ಮತ್ತು ಸಬ್ ಡಿವೀರ್ಜ್ ಆಫೀಸರವರು ತಮಿಗೆ ಯುಕ್ತ ತೋರುವ ಪ್ರಕಾರ ಅಥವಾ ಜಾಮೀರ್ದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು ಯರಪನೇ ಹರಾಜ್ ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಅದರಿಂದ ಯೇನಾದರೂ ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀರ್ದಾರನಿಂದ ಕಂದಾಯದ ಬಾಕಿಯಂತೆ ವಸೂಲ್‌ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಶಿವಾಯ 4 ಮತ್ತು 5ನೇ ಕಲಂನಲ್ಲಿ ನಮೂದಾಗುವ ಷರತ್ತಿಗೆ ವಳಪಟ್ಟು ಖಜಾನೆಗೆ ಸಲುಯಿಸುವ ನದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ವಂದಾಣೆಯಂತೆ ಲೋಕಲ್‌ಸೆಸ್ ಕೂಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿ ಇರುತ್ತಾನೆ.

7. ಪ್ರತಿ ದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರ್‌ವಾಕಾ ಲೆಖ್ಖವನ್ನ ಇಡಲೂ ಸಹಾ ಕಂಟ್ರಾಕ್ಟುದಾರನು ಬದ್ಧನಾಗಿ ಇರುವದಲ್ಲದೆ ಸಬ್ ಡಿವೀರ್ಜ್ ಮತ್ತು ತಾಲ್ಲೂಕು ವುದ್ಯೋಗಸ್ಥರ ಇನ್‌ಸ್ಪೆಕ್ಷಣೆಗೆ ಲೆಖ್ಖನ್ನು ವಳಗಾಗಿ ಇರತಕ್ಕದ್ದು.

8. ಗವರ್ನಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರ ನುಪಯೋಗಿಸತಕ್ಕದ್ದು ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಇಟ್ಟುಕೊಂಡಿರತಕ್ಕದ್ದು.

9. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರ್ತೇ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲೀ ಲೆಖ್ಖವನ್ನ ಮಂಜರಾಬಾದ್ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು. ದರಗಳ ಪಟ್ಟಿ 1882ನೇ ವೂರ್ಹ 18ನೇ ಮಕಕೂಂ ಮೈಸೂರ್ ಗೆಜಟ್ಟಿನಲ್ಲಿ ನಮೂದಾಗಿರುತ್ತೆ.

ಟಿ. ಆನಂದರಾವ್,
ಸಬ್ ಡಿವೀರ್ಜ್ ಆಫೀಸರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 20ನೇ ಜನವರೀ 1885.

ಶಿವಮೊಗ್ಗಾ ಡಿಸ್ಟ್ರಿಕ್ಟು ನಗರ ವ ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಹೈದರಘೆರಘಾಟಿ ಮತ್ತು ಆಗುಂಬೆ ವ ಲಕ್ಷ್ಮೀಪುರ ಘಾಟಿಗಳ ಟೋಲ್‌ಗೇಟ್ ಯೆಂಬ ಸುಂಕದ ಕಟ್ಟೆಗಳೊಳಗೆ ಸ್ರ್ 1885ನೇ ಇಸವಿ ಏಪ್ರಿಲ್ 1ನೇ ಮಕ್ತುಂ ಲಾಗಾಯತು, 1886ನೇ ಇಸವಿ ಮಾರ್ಚ್ 31ನೇ ಮಕ್ತುಂವರಿಗೆ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು ಬೇರೆಬೇರೆಯಾಗಿ 1885ನೇ ಇಸವಿ ಫಿಬ್ರವರೀ ತಾರೀಖು 25ರಲ್ಲಿ ನಗರ ತಾಲ್ಲೂಕು ಆಮಲ್‌ದಾರರಿಂದ ನಗರ ವೊಕ್ತಾಂನಲ್ಲೂ, ಅದೇ ತಿಂಗಳು ತಾರೀಖು 28ರಲ್ಲಿ ತೀರ್ಥಹಳ್ಳಿ ತಾಲ್ಲೂಕು ಅಮಲ್‌ದಾರರಿಂದ ತೀರ್ಥಹಳ್ಳಿ ವೊಕ್ತಾಂನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆ.

2. ವಸೂಲಿ ಹಕ್ಕನ್ನು ಕೊಂಡು ಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗ್ಗತ್ತಾಗಿರುವ ಷೆಡ್ಯೂಲ್‌ನಲ್ಲಿ ನಮೂದಾಗಿರುವ ದರಗಳ ಮೇರಿಗೇನೆ ಟೋಲ್ ವಸೂಲ್ಮಾಡಬೇಕಾದ್ದಲ್ಲದೆ ಜಾಸ್ತಿ ದರಗಳನ್ನು ವಸೂಲ್ಮಾಡಕೂಡದು. ಮತ್ತು ಆತನು 1876ನೇ ಇಸವಿ ನವಂಬರ್ 4ನೇ ಮಕ್ತುಂ 274ನೇ ನಂಬರುಳ್ಳ ಲೇಟೆ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷ್‌ನಿ ಫಾಯಿಷಾಗಿರುವ ರೂಲ್ಸ್ ಪ್ರಕಾರ ನಡಕೊಳ್ಳಬೇಕು. ಸರಕಾರ ಸ್ವತ್ತು ಮತ್ತು ಸರಕಾರ ಕೆಲಸದ ಮೇಲೆ ಹೋಗುವ ಸರಕಾರ ಉದ್ಯೋಗಸ್ತರು ಸುದಾ ಸುಂಕ ವಸೂಲಿಯಿಂದ ವಿನಾಯಿಸಲ್ಪಟ್ಟಿರುತ್ತಾರೆ.

3. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗಿಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯೂಟಿ ಕಮ್ಮಿಷನರವರು ಅಧಿಕಾರ ವುಳ್ಳವರಿಕೊಂಡಿರುತ್ತಾರೆ.